## ಪುನರಾವರ್ತನೆ ಎಂಬ ಮೂಲಮಂತ್ರ

**ಹರ್ಷಿತಾ ಡಿ.ಎಂ.**
ಎಸ್‌ಎಸ್‌ಎಲ್‌ಸಿಯಲ್ಲಿ 624 ಅಂಕ, (ಇಂಗ್ಲಿಷ್ ಮಾಧ್ಯಮ), ಎರಡನೇ ಸ್ಥಾನ, ವಾಸವಿ ಇಂಗ್ಲಿಷ್ ಹೈಸ್ಕೂಲ್, ಶಿರಾ



ನಮ್ಮ ಕಲಿಕೆಗೆ ಸಂಬಂಧಿಸಿದಂತೆ ಶಿಕ್ಷಕರು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ಪ್ರತ್ಯೇಕ ಟ್ಯೂಷನ್‌ಗೆ ಹೋಗಲಿಲ್ಲ. ಬೆಳಿಗ್ಗೆ 8ರಿಂದ ಸಂಜೆ 5.30ರ ತನಕ ಶಾಲೆ ನಡೆಯುತ್ತಿತ್ತು. 6ಕ್ಕೆ ಮನೆಗೆ ಬಂದ ನಂತರ ಹೋಂವರ್ಕ್ ಏನಾದರೂ ಕೊಟ್ಟಿದ್ದರೆ ಅದನ್ನು ಮಾಡುತ್ತಿದ್ದೆ. ನಂತರ ಅವತ್ತಿನ ಪಾಠಗಳನ್ನು ಅಭ್ಯಾಸ ಮಾಡುತ್ತಿದ್ದೆ. ವರ್ಕ್‌ಶೀಟ್ ಕೊಡುತ್ತಿದ್ದರು, ಅದನ್ನು ಮುಗಿಸಿ ಮಲಗುವ ವೇಳೆಗೆ 11.30 ಆಗುತ್ತಿತ್ತು.

ಬೆಳಿಗ್ಗೆ 6ಕ್ಕೆ ಎದ್ದು ರಾತ್ರಿ ಓದಿದ್ದನ್ನು ಮತ್ತೊಮ್ಮೆ ಮನನ ಮಾಡಿಕೊಳ್ಳುತ್ತಿದ್ದೆ. ವಾರಕ್ಕೊಮ್ಮೆ ಪುನರ್ ಅಧ್ಯಯನ ಮಾಡುತ್ತಿದ್ದೆ. ತಿಂಗಳಿಗೊಮ್ಮೆ ಮತ್ತೊಮ್ಮೆ ರೀರೀಡ್ ಮಾಡುತ್ತಿದ್ದೆ. ಶಾಲೆಯಲ್ಲೂ, ಪ್ರತಿ ಅಧ್ಯಾಯ ಮುಗಿದಾಗ ಯುನಿಟ್ ಟೆಸ್ಟ್ ಮಾಡುತ್ತಿದ್ದರು. ತಿಂಗಳಿಗೊಮ್ಮೆ ಟೆಸ್ಟ್ ಇರುತ್ತಿತ್ತು. ಈ ಟೆಸ್ಟ್‌ಗಳಿಂದಾಗಿ ಅಧ್ಯಯನದ ಪುನರಾವರ್ತನೆ ಹೆಚ್ಚಾಗುತ್ತಿತ್ತು. ಪರೀಕ್ಷೆ ಒಂದು ತಿಂಗಳು ಇದ್ದಾಗ ಹಿಂದಿನ ವರ್ಷದ ಪ್ರಶ್ನೆಪತ್ರಿಕೆಯನ್ನು ಬಿಡಿಸುತ್ತಿದ್ದರು. ನಮಗೂ ಮನೆಯಲ್ಲಿ ಮಾಡಲು ಕೊಡುತ್ತಿದ್ದರು.

ಬೇಸರ ಆದಾಗ ಅಪ್ಪ–ಅಮ್ಮನ ಜೊತೆ ಮಾತನಾಡುತ್ತಿದ್ದೆ. ನನ್ನ ಅಕ್ಕ ಕೂಡ ಮಾರ್ಗದರ್ಶನ ನೀಡುತ್ತಿದ್ದರು. ಶಿಕ್ಷಕರು ಡೌಟ್ ಇದೆ ಎಂದು ಫೋನ್ ಮಾಡಿದರೂ ಪರಿಹರಿಸುತ್ತಿದ್ದರು. ಇದೆಲ್ಲದರ ಒಟ್ಟು ಮೊತ್ತ ಈ ಫಲಿತಾಂಶ ಎನ್ನಬಹುದು.

ನೀಟ್ ಪರೀಕ್ಷೆಯಲ್ಲಿ ಯಶಸ್ಸು ಪಡೆದು, ಎಂಬಿಬಿಎಸ್ ಮಾಡಬೇಕು ಎನ್ನುವುದು ನನ್ನ ಆಸೆ.

ಅಪ್ಪ ಮಂಜುನಾಥ್ ಜಿ., ಶಿಕ್ಷಕರು. ಅಮ್ಮ ಮಂಜುಳಾ, ಗೃಹಿಣಿ.

## ಯಶಸ್ಸಿಗೆ ಬೇಕು ಖಾಸಗಿ ನೋಟ್ಸ್

**ಮೇಧಾ ಡಿ.**
ಕಲಾ ವಿಭಾಗ ರಾಜ್ಯಕ್ಕೆ ಮೊದಲ ಸ್ಥಾನ (596 ಅಂಕ), ಇಂಗ್ಲಿಷ್ ಮಾಧ್ಯಮ, ಎನ್‌ಎಂಕೆಆರ್‌ವಿ ಪಿಯು ಕಾಲೇಜು, ಬೆಂಗಳೂರು



ರಾಜ್ಯಕ್ಕೆ ಮೊದಲಿಗಳಾಗುತ್ತೇನೆ ಎಂದು ಅಂದುಕೊಂಡಿರಲಿಲ್ಲ. ಕಾಲೇಜಿಗೆ ಮೊದಲಿಗಳಾಗಬಹುದು ಎಂಬ ನಿರೀಕ್ಷೆಯಂತೂ ಇತ್ತು. ಆದರೆ, ರಾಜ್ಯಕ್ಕೇ ಮೊದಲಿಗಳಾದುದು ಅಚ್ಚರಿಯನ್ನು ಮೂಡಿಸಿದೆ.

ಅಧ್ಯಯನಕ್ಕೆ ರಚನಾತ್ಮಕ ವಿನ್ಯಾಸವನ್ನು ಮಾಡಿಕೊಂಡಿದ್ದೆ. ಪ್ರತಿದಿನ ಬೆಳಿಗ್ಗೆ 4 ಗಂಟೆಗೆ ಏಳುತ್ತಿದ್ದೆ. 4ರಿಂದ 6ರ ತನಕ ಓದುತ್ತಿದ್ದೆ. ಕಾಲೇಜಿನಿಂದ ಬಂದ ನಂತರ ಅಂದಿನ ಪಾಠವನ್ನು ಅಂದೇ ಓದಿ ಮುಗಿಸುತ್ತಿದ್ದೆ. ಪಾಠದೊಂದಿಗೆ ಆಟವೂ ಇತ್ತು. ಅಕ್ಕಪಕ್ಕದ ಮನೆಯ ಗೆಳೆಯರ ಜೊತೆ ಆಡುತ್ತಿದ್ದೆ. ಬ್ಯಾಡ್ಮಿಂಟನ್, ಗಲ್ಲಿ ಕ್ರಿಕೆಟ್ ಖುಷಿ ಕೊಡುತ್ತಿತ್ತು.

ಆಯಾ ದಿನದ ಪಾಠಕ್ಕೆ ನಾನೇ ಸ್ವಂತ ನೋಟ್ಸ್ ತಯಾರು ಮಾಡಿಕೊಳ್ಳುತ್ತಿದ್ದೆ. ನಮ್ಮ ಜೂನಿಯರ್ಸ್‌ಗಳಿಗೂ ಅವರ ನೋಟ್ಸ್ ಅವರೇ ತಯಾರಿಸಿಕೊಳ್ಳಬೇಕು ಎಂದು ಹೇಳಬಯಸುತ್ತೇನೆ. ಅಧಿಕ ಅಂಕ ಗಳಿಸುವ ಗುಟ್ಟು ಏನೆಂದರೆ, ಅವತ್ತಿನ ಪಾಠವನ್ನು ಅವತ್ತೇ ಓದಿ ಮುಗಿಸಬೇಕು. ಪುನರಾವರ್ತನೆಗೆ ಹೆಚ್ಚಿನ ಸಮಯವನ್ನು ಉಳಿಸಿಕೊಳ್ಳಬೇಕು.

ಮುಂದಿನ ದಿನಗಳಲ್ಲಿ ಮನಃಶಾಸ್ತ್ರವನ್ನು ಅಧ್ಯಯನ ಮಾಡಬೇಕು. ಆಪ್ತಸಮಾಲೋಚನೆಯಲ್ಲಿ ವೃತ್ತಿ ಆರಂಭಿಸಬೇಕು ಎನ್ನುವುದು ನನ್ನ ಕನಸು.

ಅಪ್ಪ ಎಸ್.ಎಲ್. ದಿವಾಕರ್, ಕೃಷಿಕ. ಅಮ್ಮ ಸಹನಾ, ದಿವಾಕರ್ ಟೆಕ್ಕಿ.

## ನನ್ನ ಜೊತೆ ಅಪ್ಪನೂ ಓದಿದ್ದರು!

**ಪವನ್ ಎಂ.ಎಸ್.**
ವಾಣಿಜ್ಯ ವಿಭಾಗ ರಾಜ್ಯಕ್ಕೆ ಎರಡನೇ ಸ್ಥಾನ (596 ಅಂಕ), ಇಂಗ್ಲಿಷ್ ಮಾಧ್ಯಮ, ಕುಮದ್ವತಿ ಸೈನ್ಸ್ ಅಂಡ್ ಕಾಮರ್ಸ್ ಪಿಯು ಕಾಲೇಜ್, ಶಿಕಾರಿಪುರ



ನನಗೆ ವಿಜ್ಞಾನ ವಿಭಾಗದಲ್ಲಿ ಓದಬೇಕು ಎಂದು ಅನ್ನಿಸಲಿಲ್ಲ. ವಾಣಿಜ್ಯಶಾಸ್ತ್ರದಲ್ಲಿ ಆಸಕ್ತಿ ಇದ್ದಿದ್ದರಿಂದ ಅದನ್ನೇ ಆಯ್ಕೆ ಮಾಡಿಕೊಂಡೆ. ಚಾರ್ಟೆಡ್ ಅಕೌಂಟೆಂಟ್ ಆಗಬೇಕು ಎನ್ನುವುದು ನನ್ನ ಕನಸು. ಅದಕ್ಕೆ ಕಾಮರ್ಸ್ ಸ್ವಲ್ಪ ಅನುಕೂಲ ಆಗುತ್ತದೆ ಎನ್ನುವುದು ನನ್ನ ಯೋಚನೆ.

ನನ್ನ ಪಿಯು ಅಧ್ಯಯನ ನಮ್ಮ ಪಠ್ಯಕ್ಕೆ ಕೇಂದ್ರೀಕೃತವಾಗಿತ್ತು. ಪಿಯು ಮಂಡಳಿ ನಿಗದಿಪಡಿಸಿದ ಪಠ್ಯವೇ ಮೂಲ ಆಕರ. ಅದನ್ನು ಬಿಟ್ಟರೆ ನಮ್ಮ ಅಧ್ಯಾಪಕರು ಕೊಡುತ್ತಿದ್ದ ನೋಟ್ಸ್ ಆನುಷಂಗಿಕ ಆಕರ. ಇವನ್ನು ಬಿಟ್ಟು ಬೇರೆ ಇನ್ನೇನೂ ಓದಿಲ್ಲ. ಟಾಪರ್ ಆಗುತ್ತೇನೆ ಎಂಬ ಫಲಿತಾಂಶವನ್ನು ನಿರೀಕ್ಷೆ ಮಾಡಿದ್ದೆ. ರಾಜ್ಯಮಟ್ಟದಲ್ಲಿ ಒಂದು ಸ್ಥಾನ ಗಿಟ್ಟಿಸಬೇಕು ಎಂದುಕೊಂಡಿದ್ದೆ. ಹೀಗಿದ್ದರೂ ಕಾಲೇಜಿನ ಸಣ್ಣಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೆ.

ಬೇರೆಯವರಂತೆ ನನ್ನ ಓದಿನ ಕ್ರಮ ಇಲ್ಲ. ನನಗೆ ಬೆಳಿಗ್ಗೆ ಬೇಗ ಏಳುವ ಅಭ್ಯಾಸ ಇಲ್ಲ. ತಡರಾತ್ರಿಯ ತನಕ ಓದುವುದು ಮಜಾ ಅನಿಸುತ್ತೆ. ಅವತ್ತಿನ ಪಾಠವನ್ನು ಅವತ್ತೇ ಮುಗಿಸುತ್ತಿದ್ದೆ. ನಿತ್ಯ ಕಾಲೇಜಿಗೆ ಹೋಗುತ್ತಿದ್ದೆ, ಹೆಚ್ಚುವರಿಯಾಗಿ ಟ್ಯೂಷನ್ ತೆಗೆದುಕೊಂಡಿಲ್ಲ. ಕಾಲೇಜಿನಲ್ಲಿ ಅಧ್ಯಾಪಕರು ಸೇರಿದಂತೆ ಪೋಷಕರು ನನ್ನ ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಆದಾಗ್ಯೂ ಸೆಲ್ಫ್ ಸ್ಟಡಿಗೆ ಆದ್ಯತೆ ಕೊಡುತ್ತಿದ್ದೆ. ವಿಷಯದಲ್ಲಿ ಏನೇ ಅನುಮಾನ ಇದ್ದರೂ ನಮ್ಮ ಅಧ್ಯಾಪಕರನ್ನು ಕೇಳುತ್ತಿದ್ದೆ. ಎಷ್ಟೇ ಹೊತ್ತಿನಲ್ಲಿ ಅವರನ್ನು ಸಂಪರ್ಕಿಸಿದರೂ ಪೂರಕ ಸಹಕಾರ ಅವರಿಂದ ಸಿಗ್ತಿತ್ತು.

ಕಾಲೇಜಿನಲ್ಲೇ ಎಲ್ಲ ವಿಷಯಗಳಿಗೂ ನೋಟ್ಸ್ ಕೊಡುತ್ತಿದ್ದರು. ಭರವಸೆ ಮಾತುಗಳಿಂದ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು. ಚಳಿಗಾಲದ ಸಂದರ್ಭದಲ್ಲಿ ತಡರಾತ್ರಿಯ ತನಕ ಓದುವುದು ಕಷ್ಟ. ನಿದ್ದೆ ಕಾಡತೊಡಗುತ್ತದೆ. ನನ್ನನ್ನು ಪ್ರೋತ್ಸಾಹಿಸಲು ಪಪ್ಪನೂ ಕೆಲವೊಮ್ಮೆ ನನ್ನ ಜೊತೆ ಕುಳಿತುಕೊಂಡು ಬೇರೆ ಏನನ್ನೋ ಓದುತ್ತಿದ್ದರು.

ಬೇಸರ ಅನಿಸಿದಾಗ ಸಿನಿಮಾ ನೋಡುತ್ತಿದ್ದೆ. ಓದಿನಲ್ಲಿ ನಿರಂತರತೆಯನ್ನು ಕಾಪಾಡಿಕೊಂಡಿದ್ದು, ಅನುಮಾನಗಳು ಎದುರಾದರೆ ಅಧ್ಯಾಪಕರ ಜೊತೆ ಚರ್ಚಿಸಿ ಅದನ್ನು ಬಗೆಹರಿಸಿಕೊಳ್ಳಬೇಕು. ಪಿಯು ಬೋರ್ಡ್ ನಿಗದಿಪಡಿಸಿದ ಪಠ್ಯವನ್ನು ಓದಿ ಮುಗಿಸಿದ ಮೇಲೆ ಬೋರ್ಡ್‌ನವರೇ ಪ್ರಕಟಿಸಿದ ಪ್ರಶ್ನೆ ಪತ್ರಿಕೆಯನ್ನು ಬಿಡಿಸಬೇಕು. ಅದನ್ನು ಅಭ್ಯಾಸ ಮಾಡಿದರೆ ಅಷ್ಟೇ ಸಾಕು, ಯಾರೇ ಆದರೂ ಟಾಪರ್ ಆಗಬಹುದು.

ಅಪ್ಪ ಮಂಜುನಾಥ, ಕಾಲೇಜಿನಲ್ಲಿ ಗುಮಾಸ್ತರು. ಅಮ್ಮ ಅನಿತಾ ಗೃಹಿಣಿ.